**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ</u>**

**<u>ಸಿಸಿ ಸಂಖ್ಯೆ: 1111/2020</u>**

**<u>ಪಿರ್ಯಾದಿದಾರರು:</u>** ಹೆಚ್.ಎನ್. ಶೃತಿ ಕೋಂ ಭರತ್ ಕುಮಾರ್,
ಸುಮಾರು 31 ವರ್ಷ,
ವಾಸ: ಗಣೇಶ ನಗರ ಬಡಾವಣೆ,
ಚನ್ನರಾಯಪಟ್ಟಣ ಟೌನ್ ಮತ್ತು ತಾಲ್ಲೂಕು, ಹಾಸನ ಜಿಲ್ಲೆ.

**ವಿರುದ್ಧ**

**<u>ಆರೋಪಿ/ತರು:</u>** ಬಿ.ಎಂ. ವಿನುತ ಬಿನ್ ಮೇಲಗಿರಿಗೌಡ,
ಕೋಂ ನಟರಾಜ್, 40 ವರ್ಷ ವಯಸ್ಸು,
ವಾಸ: ಛಾಯಾದೇವಿ ಮಹಾಲಿಂಗೇಗೌಡರ ಮನೆ,
ವಾರ್ಡ್ ನಂ.02, ಹೋಂಡಾ ಶೋ ರೂಂ ಪಕ್ಕದ ರಸ್ತೆ,
ಗದ್ದೆ ರಾಮೇಶ್ವರ ಬಡಾವಣೆ, ಚನ್ನರಾಯಪಟ್ಟಣ ಟೌನ್,
ಚನ್ನರಾಯಪಟ್ಟಣ ತಾಲ್ಲೂಕು.

## <u>ಆಪಾದನೆ</u>

ಶ್ರೀ ದೀಪು ಬಿ.ಸಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚನ್ನರಾಯಪಟ್ಟಣ ಆದ ನಾನು ಆರೋಪಿಯಾದ ನಿಮ್ಮ ವಿರುದ್ಧ ಕೆಳಕಂಡ ಆರೋಪಣೆ ಹೊರಿಸುವುದೇನೆಂದರೆ,

ಈ ಪ್ರಕರಣದ ಪಿರ್ಯಾದಿಯು ನೀಡಿದ ದೂರಿನ ಆಧಾರದ ಮೇಲಿಂದ, ಆರೋಪಿಯಾದ ನೀವು ಪಿರ್ಯಾದಿರವರಿಗೆ ಪರಿಚಯದವರಿದ್ದು, ಆರೋಪಿಯಾದ ನೀವು ನಿಮ್ಮ ಕೈ ಸಾಲ ತೀರುವಳಿ ಮಾಡುವ ಸಲುವಾಗಿ ಮತ್ತು ತನ್ನ ಕುಟುಂಬದ ಗೃಹಕೃತ್ಯದ ಖರ್ಚಿನ ಸಲುವಾಗಿ ಪಿರ್ಯಾದಿಯವರಿಂದ ರೂ.2,00,000.00 ಗಳನ್ನು ಸಾಲವಾಗಿ ಕೇಳಿ, ದಿನಾಂಕ 05.07.2020 ರಂದು ರೂ.2,00,000.00 ಗಳನ್ನು ಪಿರ್ಯಾದಿಯವರಿಂದ ಪಡೆದುಕೊಂಡು, ಸದರಿ ಹಣವನ್ನು ತೀರುವಳಿ ಮಾಡುವ ಖಾತ್ರಿಗಾಗಿ, ದ ಹಾಂಗ್ಕಾಂಗ್

ಅಂಡ್ ಶಾಂಗೈ ಬ್ಯಾಂಕಿಂಗ್ ಕಾರ್ಪೊರೇಷನ್ ಲಿಮಿಟಿಡ್, ಮಹಾತ್ಮಾ ಗಾಂಧಿ ರಸ್ತೆ, ಬೆಂಗಳೂರು ಶಾಖೆಗೆ ಸೇರಿದ ಚೆಕ್ ನಂಃ 320035 ಅನ್ನು ರೂ.2,00,000.00 ಮೊತ್ತಕ್ಕೆ ದಿನಾಂಕ 06.10.2020 ಕ್ಕೆ ಪಿರ್ಯಾದಿಗೆ ಕೊಟ್ಟಿದ್ದು, ಸದರಿ ಚೆಕ್‌ನ್ನು ಪಿರ್ಯಾದಿದಾರರು ದಿನಾಂಕ 06.10.2020 ರಂದು ನಗಧೀಕರಣಕ್ಕಾಗಿ ತಾನು ಖಾತೆ ಹೊಂದಿರುವ ಕಾರ್ಪೊರೇಷನ್ ಬ್ಯಾಂಕ್, ಚನ್ನರಾಯಪಟ್ಟಣ ಶಾಖೆಗೆ ಸಲ್ಲಿಸಿದಾಗ **"Account Closed"** ಎಂಬ ಹಿಂಬರಹದೊಂದಿಗೆ ದಿನಾಂಕ 07.10.2020 ರಂದು ವಾಪಸ್ಸಾಗಿರುತ್ತದೆ. ಸದರಿ ವಿಚಾರವನ್ನು ನಿಮಗೆ ತಿಳಿಸಿದಾಗ, ನೀವು ಉಡಾಫೆ ಉತ್ತರವನ್ನು ನೀಡಿರುತ್ತೀರಿ. ಆ ಬಗ್ಗೆ ಪಿರ್ಯಾದುದಾರರು ನಿಮಗೆ ದಿನಾಂಕ 05.11.2020 ರಂದು ತಮ್ಮ ವಕೀಲರ ಮೂಲಕ ನೋಟೀಸ್ ನೀಡಿದ್ದು, ಸದರಿ ನೋಟೀಸ್ ನ್ನು ನೀವು ಪಡೆದುಕೊಳ್ಳದೆ ನಾಟ್ ಕ್ಲೇಮ್ಡ್ ಎಂದು ಹಿಂಬರಹದೊಂದಿಗೆ ದಿನಾಂಕ 17.11.2020 ರಂದು ವಾಪಸ್ ಬಂದಿರುತ್ತದೆ. ಇಲ್ಲಿಯವರೆಗೆ ನೀವು ಚೆಕ್‌ನ ಮೊತ್ತವನ್ನು ಪಾವತಿಸಿರುವುದಿಲ್ಲ, ಕಾರಣ ನೀವು ಉದ್ದೇಶಪೂರ್ವಕವಾಗಿ ಪಿರ್ಯಾದಿದಾರರ ಹಣವನ್ನು ಕೊಡದೆ ಚೆಕ್‌ನ್ನು ನೀಡಿದ್ದರಿಂದ ಸದರಿ ಚೆಕ್ ಬ್ಯಾಂಕ್‌ನಿಂದ ನಗಧೀಕರಣಗೊಳ್ಳದೇ ಅಮಾನ್ಯಗೊಂಡಿರುತ್ತದೆ. ಆದ್ದರಿಂದ ನೀವು **ಲಿಖಿತಗಳ ವರ್ಗಾವಣೆ ಅಧಿನಿಯಮ ಕಾಯ್ದೆ ಕಲಂಃ 138** ರ ಅಡಿಯಲ್ಲಿ ಅಪರಾಧ ಮಾಡಿರುವಿರಿ ಎಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

1. ಮೇಲೆ ಓದಿ ಹೇಳಿದ ಆರೋಪವು ನಿಮಗೆ ಅರ್ಥವಾಯಿತೆ ?

   **ಉತ್ತರ ಃ** ಅರ್ಥವಾಯಿತು

2. ನೀವು ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ಪ್ರತಿರಕ್ಷಣೆ ಇದೆಯಾ ?

   **ಉತ್ತರ ಃ** ಪ್ರತಿರಕ್ಷಣೆ ಇದೆ

(ಸದರಿ ಆರೋಪವನ್ನು ಆರೋಪಿಗೆ ಓದಿ, ಹೇಳಿ, ಕೇಳಿ ಆರೋಪಿಯು ಕೊಟ್ಟ ಉತ್ತರವನ್ನು ಅವರ ಹೇಳಿಕೆಯಂತೆ ಬರೆದುಕೂಳ್ಳಲಾಯಿತು ಎಂದು ದೃಢೀಕರಿಸಲಾಗಿದೆ).

ದಿನಾಂಕಃ **21.10.2023**

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.